ಶ್ರೀ ಸಿದ್ದಯ್ಯ ಕಾಶಿಮಠ್.—ತಾಮ್ರದ ಕೋಟಾ ಕೊಟ್ಟನಂತರ ಆದರಿಂದ ತಾಮ್ರದ ತಂತಿಯನ್ನು ತಯಾರಿಸಿದ್ದಾರೆಯೇ ಎನ್ನುವುದಕ್ಕೆ ಸರ್ವೆ ಏನಾದರೂ ಮಾಡಿದ್ದಾರೆಯೇ ?

ಶ್ರೀ ಕೆ. ಮಲ್ಲಪ್ಪ.—ಮಾಡಿದ್ದೇವೆ. ತಾಮ್ರದ ತಂತಿಯನ್ನು ಮಾಡುವವರು ಕೆಲವು ಸರ್ಕಾರಿ ಕಂಪೆನಿಗಳಿಗೆ, REMCO ಮೊದಲಾದ ಕಂಪೆನಿಗಳಿಗೆ ಕೊಡುತ್ತಾರೆ. ಹಾಗೆ ಚೆಕ್ ಮಾಡುವ ಆಧಾರದ ಮೇಲೆಯೇ ಮುಂದಿನ ಕೋಟಾ ಕೊಡುವುದು.

ಶ್ರೀ ಜಿ. ಎನ್. ಪಾಟೀರ್.—ತಾಮ್ರವನ್ನು ಹಂಚುವಾಗ ಆ ಕಾರ್ಖಾನೆಗಳಿಗೆ ಕೆಪಾಸಿಟಿ ಇದೆ ಎಂದು ಹೇಗೆ ಹೇಳುತ್ತೀರಿ ?

ಶ್ರೀ ಕೆ. ಮಲ್ಲಪ್ಪ.—ಸರ್ವೆ ಮಾತಿ, ಪ್ರತಿಯೊಂದರಲ್ಲಿ ಎಷ್ಟು ಬಂಡವಾಳವನ್ನು ಹಾಕಿದ್ದಾರೆ, ಎಷ್ಟು ಯಂತ್ರಗಳಿವೆ, ಎಷ್ಟು ಜನ ಕೆಲಸಗಾರರು ಕೆಲಸ ಮಾಡುತ್ತಾರೆ, ಎನ್ನುವ ವಿವರಗಳನ್ನೆಲ್ಲ ಸಂಗ್ರಹಿಸಿ ಕೈಗಾರಿಕಾ ಶಾಖೆಯ ಡೈರೆಕ್ಟರವರಿಗೆ ಕಳಿಸಿ ಕೊಡುತ್ತಾರೆ. ಆ ಮಾಹಿತಿಯ ಆಧಾರದ ಮೇಲೆ ಕೋಟಾ ಅರಾಟ್ ಮಾಡುತ್ತಾರೆ.

ಶ್ರೀ ಬಿ. ಎಂ. ಪಾಟೀರ್.—ಇವುಗಳಲ್ಲಿ ಯಾವುದಾದರೂ ಕಾರ್ಖಾನೆಗಳು ಅವರಿಗೆ ಕೊಟ್ಟ ಕೋಟಾ ಸರಿಯಾಗಿ ಉಪಯೋಗ ಮಾಡುತ್ತಿಲ್ಲ ಎಂದು ಸರ್ಕಾರಕ್ಕೆ ತಿಳಿದು ಬಂದಿದೆಯೇ ?

ಶ್ರೀ ಕೆ. ಮಲ್ಲಪ್ಪ.—ಎಂಟು ಕಂಪೆನಿಗಳೂ ಸರಿಯಾಗಿ ಉಪಯೋಗ ಮಾಡುತ್ತಿವೆ ಎಂದು ಗೊತ್ತಿದೆ. ಅವರೆಲ್ಲಿ ದುರುಪಯೋಗ ಮಾಡಿಲ್ಲ ಎಂದು ಕಂಡು ಬಂದಿದೆ. ಒಂದು ವೇಳೆ ದುರುಪಯೋಗ ಮಾಡಿದ್ದರೆ ಅಂಥವರಿಗೆ ಮುಂದಿನ ಕೋಟಾ ಸಿಕ್ಕುತ್ತಿರಲಿಲ್ಲ.

Teachers working in the DistrictSc hool Board, Dharwar.

*Q.—55. Sri SIDDAIAH KASHIMATH (Shirahatti).—

Will the Government be pleased to state :—

(*a*) the number of Primary School teachers (male and female) that are working in the District School Board, Dharwar ;

(*b*) the number of school-going children in the above district mainly to the District School Board Primary Schools ;

(*c*) whether the present teaching staff is adequate to teach the students in the said District School Board Schools ?

A.—Sri S. R. KANTHI (Minister for Education).—

(*a*) *Primary School Teachers* :

Males.	*Femles.*
5,050	635.

(*b*) 2,56,788

(*c*) Yes.

ಶ್ರೀ ಸಿದ್ದಯ್ಯ ಕಾಶಿಮಠ್.—ಮಂಡಲಯ ಶಾಲೆಗಳಲ್ಲಿರುವ ವಿದ್ಯಾರ್ಥಿಗಳಿಗೆ ಬೋಧಿಸಲು ಸಾಕಷ್ಟು ಶಿಕ್ಷಕರಿದ್ದಾರೆ ಎಂದು ಹೇಳಿದ್ದಾರೆ. ಆದರೆ ಸರ್ಕಾರದ ಲೆಕ್ಕದ ಪ್ರಕಾರ ಒಂದು ಸಾವಿರ ಶಿಕ್ಷಕರ ಕೊರತೆ ಇದೆ. ಆ ಕೊರತೆಯನ್ನು ತುಂಬುವುದಕ್ಕೆ ಪ್ರಯತ್ನ ಮಾಡುತ್ತಾರೆಯೇ?

†ಶ್ರೀ ಎಸ್. ಆರ್. ಕಂಠಿ.—ಈ ತರಹ ಪರಿಸ್ಥಿತಿ ಎಲ್ಲ ಕಡೆಗೂ ಇದೆ. ಧಾರವಾಡ ಜಿಲ್ಲೆಯಲ್ಲಿ ಶಿಕ್ಷಕರ ಕೊರತೆ ಏನು ಇದೆ ಎಂದು ಮಾನ್ಯ ಸದಸ್ಯರು ಹೇಳುತ್ತಾರೆಯೋ ಅದು ಅಷ್ಟು ಜಾಸ್ತಿ ಅಲ್ಲ. 6,420 ಶಿಕ್ಷಕರು ಇರಬೇಕಾಗಿದ್ದು ಅದರಲ್ಲಿ 5,685 ಮಂದಿ ಮಾತ್ರ ಇದ್ದಾರೆ. ಈ ಪರಿಸ್ಥಿತಿ ಎಲ್ಲ ಜಿಲ್ಲೆಗಳಲ್ಲಿಯೂ ಇದೆ. ವಿದ್ಯಾರ್ಥಿ ಶಿಕ್ಷಕರ ಪ್ರಮಾಣ 1:45 ಬರುತ್ತದೆ. ಇದು ಅಷ್ಟೇನೂ ಆಕ್ಷೇಪಣೆ ತೆಗೆದುಕೊಳ್ಳುವಂಥದ್ದಲ್ಲ.

ಶ್ರೀ ಸಿದ್ದಯ್ಯ ಕಾಶಿಮಠ್.—ರಾಜ್ಯದಲ್ಲಿರುವ ಎಲ್ಲ ಪ್ರಾಥಮಿಕ ಶಾಲೆಗಳನ್ನೂ ಸರ್ಕಾರ ದವರೇ ವಹಿಸಿಕೊಂಡು ಬೆಳಗಾಂ, ಬಿಜಾಪುರ, ಧಾರವಾಡ, ಮತ್ತು ಕಾರವಾರ ಜಿಲ್ಲೆಗಳಲ್ಲಿ ಸ್ಕೂಲ್ ಬೋರ್ಡ್ ವತಿಯಿಂದ ನಡೆಸುತ್ತಿರುವುದಕ್ಕೆ ಕಾರಣವೇನು ?

ಶ್ರೀ ಎಸ್. ಆರ್. ಕಂಠಿ.—ಸರ್ಕಾರದ ಇಚ್ಛೆ ಹಾಗೇನೂ ಇಲ್ಲ. ಎಲ್ಲ ಕಡೆಯೂ ಪ್ರಾಥಮಿಕ ವಿದ್ಯಾಭ್ಯಾಸಕ್ಕೆ ಬೋರ್ಡ್‌ಗಳನ್ನು ಮಾಡಬೇಕೆಂದು ಪಂಚಾಯತಿ ರಾಜ್ಯ ವಿಧೇಯಕದಲ್ಲಿ ಒಂದು ವಿಶೇಷ ಪ್ರಾವಿಷನ್ ಇದೆ. ಆದರೆ ಇದಕ್ಕೆ ಒಂದು ಪ್ರತ್ಯೇಕ ವಿಧೇಯಕವನ್ನು ತಂದು ಅದಕ್ಕೆ ಅಂಗೀಕಾರ ಪಡೆಯಬೇಕು ಎನ್ನುವ ಇಚ್ಛೆ ಸರ್ಕಾರಕ್ಕೆ ಇದೆ. ಆರ್.ಇಂಡಿಯಾ ಎಜುಕೇಷನ್ ಕಮಿಷನ್ ಅವರು ಒಂದು ಸ್ಟಾಟ್ಯೂಟರಿ ಬಾಡಿ ಮಾಡಬೇಕೆಂದು ಏನು ಹೇಳಿದ್ದಾರೆ ಅದರಂತೆ ಈಗ ಪಂಚಾಯಿತಿ ರಾಜ್ ವಿಧೇಯಕದಲ್ಲಿ ಪ್ರಾವಿಜನ್ ಮಾಡಿದ್ದೇವೆ ಇದಕ್ಕೆ ಒಂದು ಸಬ್-ಕಮಿಟಿಯನ್ನು ಮಾಡಿದ್ದೇವೆ. ಸ್ಟಾಟ್ಯೂಟರಿ ಬಾಡಿ ಮಾಡಬೇಕೆಂದು ಸರ್ಕಾರದ ಇಚ್ಛೆ ಇದೆ.

ಶ್ರೀ ಎಸ್. ಎಂ. ಗುರೆಡ್ಡಿ.—ಮಾನ್ಯ ಮಂತ್ರಿಗಳು ಹೇಳಿದಂಥ 5,685 ಮಂದಿ ಶಿಕ್ಷಕರಲ್ಲಿ ಟ್ರೇನಿಂಗ್ ಆದವರು ಎಷ್ಟು ಜನ, ಮೊನ್ನೆ ಹೊಸದಾಗಿ ತೆಗೆದುಕೊಂಡವರಲ್ಲಿ ಆಗಿಲ್ಲದೆ ಇರುವವರು ಹೆಚ್ಚು ಜನ ಇದ್ದಾರೆ ಎನ್ನುವುದು ಸರ್ಕಾರಕ್ಕೆ ಗೊತ್ತಿದೆಯೇ?

ಶ್ರೀ ಎಸ್. ಆರ್. ಕಂಠಿ.—ಧಾರವಾಡ ಜಿಲ್ಲೆಯ ಮಟ್ಟಿಗೆ ಹೇಳಬೇಕಾದರೆ, ಮುಂಬೈ ಕರ್ನಾಟಕದ ಮಟ್ಟಿಗೆ ಹೇಳಬೇಕಾದರೆ, ಬಹಳ ಜನ ಟ್ರೇನಿಂಗ್ ಆದವರು ಇರುತ್ತಾರೆ, ಟ್ರೇನಿಂಗ್ ಆಗಿಲ್ಲದವರು ಕಡಮೆ ಇರುತ್ತಾರೆ. ಒಂದೊಂದು ಜಿಲ್ಲೆಯಲ್ಲಿ 600 ಮಂದಿ, 800 ಮಂದಿ, ಸಾವಿರ ಮಂದಿಯವರೆಗೆ ಮಾತ್ರ ಟ್ರೇನಿಂಗ್ ಆಗಿಲ್ಲದವರು ಇದ್ದಾರೆ. ಈ ಪ್ರಮಾಣ ಬಹಳ ಕಡಮೆ ಇದೆ. ಹೊಸದಾಗಿ ಏನು ಶಿಕ್ಷಕರನ್ನು ತೆಗೆದುಕೊಂಡಿದ್ದೇವೆ ಅದರಲ್ಲಿ ಕೂಡ ಟ್ರೇನಿಂಗ್ ಆದವರನ್ನೇ ತೆಗೆದುಕೊಂಡಿದ್ದೇವೆ.

Sri S. SIVAPPA.—Is it the policy of the Government to hand over education to private enterprise or will Government itself take care of education ?

Sri S. R. KANTHI.—Education is not going to be handed over to private enterprise in sense in which my friend wants it. It is going to be decentralised. The idea of Government is to set up District Education Boards in every district. There is a provision in the Panchayatiraj Act for a special committee of the Zilla Parishad. The present thinking of the Education Commission is that instead of a special committee there should be a statutory body at the district level and primary and secondary education will be handed over to them.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಇರುವ ಸಿಬ್ಬಂದಿಯನ್ನು ಗಮನಿಸಿದರೆ 50 ಮಕ್ಕಳಿಗೆ ಒಬ್ಬ ಉಪಾಧ್ಯಾಯರಿದ್ದಂತಾಗುವುದರಿಂದ ಸರಿಯಾಗಿ ಶಿಕ್ಷಣ ಕೊಡಲು ಸಿಬ್ಬಂದಿ ಸಾಲದೆಂಬುದು ಗಮನಕ್ಕೆ ಬಂದಿದೆಯೇ ?

ಶ್ರೀ ಎಸ್. ಆರ್. ಕಂಠಿ.—ಅದೊಂದೇ ಕಡೆ ಅಲ್ಲ, ಎಲ್ಲ ಕಡೆಯೂ ಸಿಬ್ಬಂದಿ ಕೊರತೆ ಇದೆ. ಈಗ ಸಲ 25 ಸಾವಿರ ಉಪಾಧ್ಯಾಯರನ್ನು ತೆಗೆದುಕೊಳ್ಳಬೇಕೆಂದಿದ್ದೆವು. ಆದರೆ 14 ಸಾವಿರ ಮಾತ್ರ ತೆಗೆದುಕೊಳ್ಳಲು ಸಾಧ್ಯವಾಯ್ತು. ನಾಲ್ಕನೆಯ ಯೋಜನೆಯಲ್ಲಿ ಪರಿಸ್ಥಿತಿ ಸುಧಾರಿಸಬಹುದೆಂಬ ನಂಬಿಕೆ ಇದೆ.

Acquisition of Land for Village extension.

*Q.—71.—Smt. G. C. BHAGEERATHAMMA (Tumkur).—

Will the Government be pleased to state :—

(*a*) whether it is a fact that acquisition proceedings for village extension at Vengalamanahally in Koratagere Taluk, Tumkur District, were finalised and order of award was passed long back ;